ISSN : 2320-0391

साहित्य और संस्कृति


# सृजन ಸೃಜನ

हिंदी-कन्नड त्रैमासिक पत्रिका

ಹಿಂದಿ-ಕನ್ನಡ ತ್ರೈಮಾಸಿಕ ಪತ್ರಿಕೆ

Peer Reviewed Journal

जनवरी-दिसम्बर २०२०



ಪ್ರೊ. ಎಂ.ಎಸ್. ಮಾಗಣಗೇರಿ
C/o ಪ್ರೊ. ಎಂ.ಎಸ್.ಝುಳಕಿ
ಮನೆ ನಂ.೬೫ ಕೆ.ಎಚ್. ಕಾಲೋನಿ
ಸೋಲಾಪುರ ರಸ್ತೆ ವಿಜಯಪುರ-೫೮೬೧೦೩

# ಪರಿವಿಡಿ


೧. ಇಂದಿರಾಬಾಯಿ, ಇಂದಿರಾ ಕಾದಂಬರಿಂಗಳ ಮೇಲೆ ವಚನ ಸಾಹಿತ್ಯದ ಪ್ರಭಾವ ೨೭

- ಡಾ. ಬಸವರಾಜ ಕುಂಬಾರ

೨. ಶರಣರ ನಿಲುವಿನಲ್ಲಿ ದೇಹ-ಪ್ರಾಣ-ಇಂದ್ರಿಯಗಳ ಅನುಭವ ೩೦

- ಡಾ. ಚಂದ್ರು ತಳವಾರ

೩. ವಚನಗಳಲ್ಲಿ ಅಡಗಿದ ಆದರ್ಶ ಸಮಾಜದ ಕನಸು ೩೩

- ಶ್ರೀ ದೊಡ್ಡಬಸಪ್ಪ ಸಿದ್ದನಗೌಡ ಹುಡೇದಗಡ್ಡಿ

೪. ವರ್ತಮಾನದ ಧಾರ್ಮಿಕ ಸಂಕಟಗಳು ೩೬

- ಪ್ರೊ. ಗುರುಸ್ವಾಮಿ ಜಿ. ಹಿರೇಮಠ

೫. ಬಸವಣ್ಣನವರ ವಚನಗಳಲ್ಲಿ ಭಕ್ತಿಯ ಪ್ರಸ್ತುತತೆ ೩೯

- ಡಾ. ಎ. ಆಯ್. ಹಂಜಗಿ

೬. ಜೈನ ಭಕ್ತಿ ಮಾರ್ಗ : ಸಾವಿನ ಪರಿಕಲ್ಪನೆ ೪೧

- ಡಾ. ಎಂ. ಎಸ್. ಮಾಗಣಗೇರಿ

೭. ವೀರಶೈವ ಭಕ್ತಿ ಸಾಹಿತ್ಯದ ತ್ರಿಭಾಷಾ ಕವಿ 'ಪಾಲ್ಕುರಿಕೆ ಸೋಮನಾಥ' ೪೪

- ಡಾ. ಮಂಜಣ್ಣ ಪಿ.

೮. ಭಕ್ತಿ ಮಾರ್ಗಗಳ ಪ್ರಸ್ತುತತೆ : ವೀರಶೈವ ಮಾರ್ಗ ೪೮

- ಮಂಜುನಾಥ ಪೂಜೇರಿ

೯. ನಾಗಚಂದ್ರನ ಉದಾತ್ತ ರಾವಣ ೫೧

- ಶ್ರೀಮತಿ ಮೀನಾಕ್ಷಿ ಪಾಟೀಲ

೧೦. ವರ್ತನಮಾನದಲ್ಲಿ ಜೈನ ಮಾರ್ಗದ ಪ್ರಸ್ತುತತೆ ೫೪

- ಶ್ರೀ ಎಮ್. ಆರ್. ನಾಡಗೌಡ್ರ

೧೧. ಬಸವಣ್ಣನವರ ವಚನಗಳಲ್ಲಿ ವೈಚಾರಿಕತೆ ೫೬

- ಡಾ. ನಾಗವರ್ಮ. ಜಿ. ಎಚ್

೧೨. ಅಂಬಿಗರ ಚೌಡಯ್ಯನ ವಚನಗಳಲ್ಲಿ ಸಾಮಾಜಿಕ ವಿವೇಚನೆ ೫೯

- ಡಾ. ಎಂ. ನಂಜುಂಡಸ್ವಾಮಿ

೧೩. ಭಕ್ತಿಮಾರ್ಗದಲ್ಲಿ ಶಿವಶರಣೆ ಹೇಮರಡ್ಡಿ ಮಲ್ಲಮ್ಮ ೬೨

- ಡಾ. ಪದ್ಮಾ ಹೊಸಕೋಟಿ

# ಜೈನ ಭಕ್ತಿ ಮಾರ್ಗ : ಸಾವಿನ ಪರಿಕಲ್ಪನೆ

• ಡಾ. ಎಂ. ಎಸ್. ಮಾಗಣಗೇರಿ

ಜೈನ ಧರ್ಮದಲ್ಲಿ ಕಂಡು ಬರುವ ಹುಟ್ಟು-ಸಾವು, ಧರ್ಮ-ಅಧರ್ಮ, ಪಾಪ-ಪುಣ್ಯ, ಸ್ವರ್ಗ-ನರಕ, ತಪಸ್ಸು-ಮೋಕ್ಷ, ಭವಾವಳಿ, ವೈರಾಗ್ಯ, ಪಂಚಕಲ್ಯಾಣ ಮೊದಲಾದ ತಾತ್ವಿಕ ವಿಚಾರಗಳು ಜೈನ ಸಿದ್ಧಾಂತಗಳ ವಿವಿಧ ಮುಖಗಳೇ ಆಗಿವೆ. ಅದರಲ್ಲೂ ಹುಟ್ಟು-ಸಾವಿನ ಬಗ್ಗೆ ಇಟ್ಟುಕೊಂಡಿರುವ ತಿಳುವಳಿಕೆ ಮಹತ್ವವಾದದ್ದು. ಹುಟ್ಟಿಗಿಂತ ಸಾವಿಗೇ ಹೆಚ್ಚು ಮಹತ್ವ ಕೊಟ್ಟಿರುವುದನ್ನು ಕಾವ್ಯಗಳು ಖಚಿತಪಡಿಸುತ್ತವೆ. ಹುಟ್ಟು-ಸಾವಿನ ನಿರಂತರ ಚಲನೆಯನ್ನು ಜೈನರು ಮಾನ್ಯ ಮಾಡುತ್ತಾರೆಯೇ ಹೊರತು, ಹುಟ್ಟನ್ನು ಆರಂಭವೆಂದಾಗಲೀ, ಸಾವನ್ನು ಅಂತ್ಯವೆಂದಾಗಲೀ ಭಾವಿಸುವುದಿಲ್ಲ. ಜೀವವು ಪಡೆದುಕೊಳ್ಳುವ ರೂಪಾಂತರಗಳನ್ನೇ ಜೈನರು ಭವಾವಳಿ ಅಥವಾ ಜನ್ಮಾಂತರಗಳೆಂದು ಕರೆಯುತ್ತಾರೆ.ಸಾವಿಗೆ ಜೈನರು ಅತ್ಯಂತ ಮಹತ್ವದ ಸ್ಥಾನ ನೀಡಿದ್ದಾರೆ. ಉತ್ತಮ ಸಾವನ್ನು ರೂಪಿಸಿಕೊಳ್ಳಲು ಕೊಟ್ಟಿರುವ ಮಾರ್ಗದರ್ಶಿ ಸೂತ್ರಗಳು ಜೈನ ಧರ್ಮದಲ್ಲಿರುವಷ್ಟು ಮತ್ತಾವ ಧರ್ಮದಲ್ಲೂ ಸಿಗುವುದಿಲ್ಲ. ಪುನರ್ಜನ್ಮದ ಪರಿಕಲ್ಪನೆಯನ್ನು ಒಪ್ಪುವ ಜೈನ ಸಿದ್ಧಾಂತವು ಮುಂದಿನ ಜನ್ಮದಲ್ಲಿ ಉತ್ತಮ ನೆಲೆ ಸಿಗಬೇಕಾದರೆ ಈ ಜನ್ಮದ ಸಾವು ಸಾರ್ಥಕವಾಗಿರಬೇಕೆಂದು ಪ್ರತಿಪಾದಿಸುತ್ತದೆ. ಸಾವು ಪುನರ್ಜನ್ಮಕ್ಕೆ ನಾಂದಿ ಎಂಬ ತಿಳುವಳಿಕೆ ಜೈನ ಧರ್ಮದ್ದು. ಸಾವು ಈ ಜನ್ಮದ ಕೊನೆಯಲ್ಲ ಮರುಜನ್ಮದ ಆರಂಭ ಎಂಬ ಕಲ್ಪನೆಯಿಂದಾಗಿ ಸಾವನ್ನು ಅಸಾಮಾನ್ಯ ಪ್ರಸಂಗವಾಗಿ ಪರಿಣಮಿಸಿದೆ. ಆದಿನಾಥ ನಿರ್ವಾಣ ಹೊಂದಿದ ಸಂದರ್ಭದಲ್ಲಿ ದುಃಖಿತನಾದ ಭರತನಿಗೆ ಮುನಿಗಳು ಹೇಳುವ ಮಾತುಗಳನ್ನು ಇಲ್ಲಿ ಸ್ಮರಿಸಿಕೊಳ್ಳಲೇಬೇಕು.

**ಭವರಾಶಿಯೊಳಿಂತು ಜೀವ ನಿವಹಂ ಬರ್ದುತ್ತುಮಿರ್ಕುಂ ಮಹೋ/ ತ್ಸವಮತ್ತೀ ಗುರುವಿಂತು ದಾಂಟಿದೊಡಂ ಬೇಡೀ ವಿಷಾದಂ ನಿರ/ ಸ್ತ ವಿವೇಕಂಬೊಲಿದೇಕೆ ಮೋಹಿಸಿದಪೈ ನಿರ್ವಾಣ ಸಕ್ತಂಗೆ ವ / ಸ್ತು ವಿದರ್ ನಿನ್ನ ವೊಲಾರ್ಪೆ ಬಿರ್ಭುವನದೊಳ್ ಪಟ್ಟಂಡ ಧಾತ್ರೀಶ್ವರಾ.** (ಆದಿಪುರಾಣ ಆ-೧೬-೫೯)

ತಂದೆಯಾದ ಆದಿನಾಥ ದೇಹ ತ್ಯಾಗ ಮಾಡಿದ ಈ ಪ್ರಸಂಗ ಸಾಮಾನ್ಯವಾದುದಲ್ಲ, ಅದೊಂದು ಮಹೋತ್ಸವ. ಹೀಗಿರುವಾಗ ವಿಷಾದವೇಕೆ? ಎಂದು ಶೋಕ ಸಾಗರದಲ್ಲಿ ಮುಳುಗಿದ್ದ ಮಗ ಭರತನನ್ನು ಮುನಿಗಳು ಸಂತೈಸುತ್ತಾರೆ. ಇಲ್ಲಿ ಸಾವನ್ನು 'ಮೃತ್ಯುಮಹೋತ್ಸವ'ವನ್ನಾಗಿ ಸ್ವೀಕರಿಸಬೇಕೆಂಬುದು ಸ್ಪಷ್ಟವಾಗಿ ಕಂಡುಬರುತ್ತದೆ. ಪ್ರತಿಯೊಂದು ಜೈನ ಕಾವ್ಯವು 'ಸಮಾಧಿ ಮರಣ' ಕೇಂದ್ರಿತವಾಗಿರುವುದು ಸರ್ವವಿಧಿತ. 'ಉತ್ತಮ ಜೀವನ' ಜೈನ ಕಾವ್ಯಗಳ ಮುಖ್ಯ ವಸ್ತುವಾಗಿರುವುದಕ್ಕಿಂತ ಹೆಚ್ಚಾಗಿ 'ಉತ್ತಮ ಮರಣ'ವೇ ಮುಖ್ಯ ವಸ್ತುವಾಗಿರುವುದನ್ನು ಗಮನಿಸಬಹುದು. ಸಾವಿನ ಕುರಿತಾದ ಪರಿಕಲ್ಪನೆಯನ್ನು ವಿವರವಾಗಿ ಅಧ್ಯಯನ ಮಾಡದ ಹೊರತು ಜೈನ ಧರ್ಮದ ಜೀವನ ಪರಿಕಲ್ಪನೆಯನ್ನು ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ ಎನ್ನುವಷ್ಟರ ಮಟ್ಟಿಗೆ ಜೈನ ಕಾವ್ಯಗಳಲ್ಲಿ ಸಾವಿನ ಉಲ್ಲೇಖಗಳಿವೆ. ಬಹುತೇಕ ಭಾರತೀಯ ಸಾಹಿತ್ಯದಲ್ಲಿ ಸಾವಿನ ಭಯಾನಕತೆಯ ವಿವರಗಳೇ ಹೆಚ್ಚಾಗಿ ದೊರೆತರೆ ಜೈನ ಧರ್ಮಶಾಸ್ತ್ರ ಮತ್ತು ಸಾಹಿತ್ಯದಲ್ಲಿ ಇದಕ್ಕೆ ವ್ಯತಿರಿಕ್ತವಾಗಿ ಮರಣವನ್ನು ಸಹಜ ಪ್ರಸಂಗವಾಗಿ ಸ್ವೀಕರಿಸಿ ಆರಾಧಿಸುತ್ತಾ ಬಂದಿರುವದು ಕಂಡುಬರುತ್ತದೆ.

RNI Regd. No. KARBIL/2014/54464



रेल की पटरियों पर चलते कदम
रेल की पटरियों पर
कुचले गए ।
घर पहुँचने की ललक
संसार से ही विदा कर गई ।
कहीं कुछ नहीं बदला
''वही मुआवज़ा घोषित हो गया ।''
अभी लाखों कदम सड़कों पर
चल रहे हैं,
दूध पिलाती माएँ
गोदियों में शिशु उठाए
चल रही हैं,
चल रहे है चार-पाँच-छह वर्ष के बच्चे
पिताओं की उंगलियाँ पकड़े
नन्हीं टाँगों से सैकडों कोस चलने के सपने लिए ।
मूक दर्शक बने देखते हैं
जिन्होंने पहुँचाना था उन्हें
अपने-अपने घरों तक ।
विनम्र नमन जो चले गए
सदा-सदा के लिए
रेल की पटरियों से ।

- अशोक लव नई दिल्ली

ರೈಲು ಗಾಡಿಯ ಹಳಿಯ
ಮೇಲೆ ನಡೆಯುವ ಹೆಜ್ಜೆ
ರೈಲಿನಡಿ ಸಿಲುಕಿ
ಪುಡಿ ಪುಡಿಯಾದವು.
ಮನೆ ಮುಟ್ಟುವ ತವಕದಲ್ಲಿ
ಈ ಜಗತ್ತಿನಿಂದಲೇ ಹೊರಟು ಹೋದರು
ಎಲ್ಲಿಯೂ ಚೂರು ಸಹ ಬದಲಾಗಲಿಲ್ಲ
"ಅದೇ ದುಡ್ಡು ಘೋಷಣೆಯಾಯಿತು"-
ಇನ್ನೂ ಲಕ್ಷ ಲಕ್ಷ ಕಾಲುಗಳು
ರಸ್ತೆಯ ಮೇಲೆ ನಡೆಯುತ್ತಿವೆ.
ಹಾಲುಣಿಸುತ್ತಿರುವ ತಾಯಂದಿರು
ಸೆರಗಿನಲ್ಲಿ ಶಿಶುಗಳನ್ನು ಎತ್ತಿಕೊಂಡು
ನಡೆಯುತ್ತಿದ್ದಾರೆ
ಹೊರಟಿದ್ದಾರೆ ನಾಲ್ಕು-ಐದು-ಆರು
ವರ್ಷದ ಕಂದಮ್ಮಗಳು
ತಂದೆಯ ಬೆರಳುಗಳನ್ನು ಹಿಡಿದು
ಪುಟ್ಟ ಕಾಲುಗಳಿಂದ ನೂರಾರು ಮೈಲುಗಳನ್ನು
ನಡೆಯುವ,
ಕನಸು ಹೊತ್ತು
ಮೂಕ ದರ್ಶಕರಾಗಿ ನೋಡುತ್ತಿದ್ದಾರೆ.
ಅವರಿಗೆ ತಲುಪುವುದಿತ್ತು
ತಮ್ಮ ತಮ್ಮ ಮನೆಗಳಿಗೆ
ಅದಾಗಲಿಲ್ಲ
ಸ್ಥಿರವಾಗಿ ಹೊರಟು ಹೋದರು,
ಹೋದವರಿಗೆ ವಿನಮ್ರ ನಮನ.

- ಅಶೋಕ ಲವ ನವದೆಹಲಿ

सौम्य प्रकाशन
'कबीर कुंज' महाबलेश्वर कॉलनी,
दर्गा जेल के सामने,

ಸೌಮ್ಯ ಪ್ರಕಾಶನ
'ಕಬೀರ ಕುಂಜ' ಮಹಾಬಳೇಶ್ವರ ಕಾಲೋನಿ,
ದರ್ಗಾ ಜೇಲ ಮುಂದೆ,